**ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:04.10.2018 ರಂದು ಅಪರಾಹ್ನ 5:00 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ ಪಂಚತಂತ್ರ ತಂತ್ರಾಂಶದಲ್ಲಿ ಗ್ರಾಮ ಪಂಚಾಯತಿಗಳ ತೆರಿಗೆ ವಸೂಲಾತಿ ಮತ್ತು ಬೇಡಿಕೆ ವಸೂಲಾತಿ ನಮೂದಿಸುವ ಬಗ್ಗೆ ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಜರುಗಿದ ಸಭೆಯ ನಡವಳಿಗಳು.**

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)**

1. ಎಲ್.ಕೆ.ಅತೀಕ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ಎಂ.ಕೆ. ಕೆಂಪೇಗೌಡ, ನಿರ್ದೇಶಕರು(ಪಂ.ರಾಜ್-1) ಗ್ರಾಅಪ ಇಲಾಖೆ, ಬೆಂಗಳೂರು.
3. ಎನ್.ಕೃಷ್ಣಪ್ಪ ಕೋಡಿಪಾಳ್ಯ, ನಿರ್ದೇಶಕರು(ಇ-ಆಡಳಿತ) (ಪ್ರ) ಗ್ರಾಅಪ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು (ಗ್ರಾ)
5. ಶ್ರೀಕೃಷ್ಣ ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು ಎನ್.ಐ.ಸಿ. ಬೆಂಗಳೂರು.
6. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು ಎನ್.ಐ.ಸಿ. ಬೆಂಗಳೂರು.
7. ಪ್ರಶಾಂತ, ತಾಂತ್ರಿಕ ನಿರ್ದೇಶಕರು, ಎನ್ಐಸಿ, ಬೆಂಗಳೂರು.
8. ಗಗನ್ ಎ.ಎಸ್, ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
9. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು, (ಇ-ಪಂಚಾಯತ್), ಗ್ರಾಅಪ.
10. ನಿತಿನ್. ನಾಯ್ಕ, ಪ್ರೋಗ್ರಾಮರ್, ಎನ್ಐಸಿ, ಬೆಂಗಳೂರು
11. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ಬೆಂಗಳೂರು (ಗ್ರಾ)

ನಿರ್ದೇಶಕರು(ಇ-ಆಡಳಿತ) (ಪ್ರ) ರವರು ಸಭೆಯಲ್ಲಿ ಹಾಜರಿದ್ದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು.

1. ಪಂಚತಂತ್ರ ತಂತ್ರಾಂಶದ ಡಿಸಿಬಿ ವರದಿಯಂತೆ 897 ಗ್ರಾಮ ಪಂಚಾಯತಿಗಳಲ್ಲಿ ಯಾವುದೇ ಆಸ್ತಿಗಳಿಗೆ ಬೇಡಿಕೆ ಮತ್ತು ವಸೂಲಾತಿಯನ್ನು ಅಳವಡಿಸದೇ ಇರುವುದನ್ನು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.

   ಮಾನ್ಯ ಪ್ರಧಾನ ಕಾರ್ಯದರ್ಶಿರವರು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಿ ಬೇಡಿಕೆ ಮತ್ತು ವಸೂಲಾತಿಯನ್ನು ಅಳವಡಿಸುವಂತೆ ಮೇಲ್ವಿಚಾರಣೆ ಮಾಡಲು ನಿರ್ದೇಶಕರು, ಪಂ.ರಾಜ್-1 ಮತ್ತು ನಿರ್ದೇಶಕರು, (ಇ-ಆಡಳಿತ) ರವರಿಗೆ ಸೂಚಿಸಿದರು.

   **[ಕ್ರಮ: ನಿರ್ದೇಶಕರು (ಪಂ.ರಾಜ್-1) ಮತ್ತು ನಿರ್ದೇಶಕರು(ಇ-ಆಡಳಿತ)]**

2. ಗ್ರಾಮ ಪಂಚಾಯಿತಿಯ ಪಂಚತಂತ್ರ ತಂತ್ರಾಂಶದಲ್ಲಿ ಪ್ರತಿ ಮಾಹೆಯಲ್ಲಿ ನಿರ್ವಹಿಸುವಂತಹ ಜಮಾ ಖರ್ಚುಗಳ ವಿವರಗಳನ್ನು ಬ್ಯಾಂಕ್ ವರದಿಯಂತೆ ಹೊಂದಾಣಿಕೆ ಮಾಡಿ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಸಮನ್ವಯ ಸಾಧಿಸಲು ಆರ್ಥಿಕ ಪ್ರಗತಿ ಸಾಧಿಸಲು BRS (Bank Reconciliation Statement) ಮಾಡಬೇಕು. ಇಲ್ಲವಾದಲ್ಲಿ ಜಮಾ ಖರ್ಚುಗಳ ಸರಿಯಾದ ಲೆಕ್ಕ ನಿರ್ವಹಿಸಲು ಸಾಧ್ಯವಾಗುವುದಿಲ್ಲ ಹಾಗೂ ವೈಜ್ಞಾನಿಕ ರೀತಿಯಲ್ಲಿ ಆರ್ಥಿಕ ಪ್ರಗತಿ ಸಾಧಿಸಲು ಸಾಧ್ಯವಾಗುವುದಿಲ್ಲ ಮತ್ತು ಜಮಾ ಖರ್ಚುಗಳ ವಿವರದಲ್ಲಿ ಪಾರದರ್ಶಕತೆ ಇರುವುದಿಲ್ಲ. ಆದುದರಿಂದ ಎಲ್ಲಾ ಗ್ರಾಮ ಪಂಚಾಯತಿರವರು ಮಾಹೆವಾರು BRS ಮಾಡುವುದು ಅವಶ್ಯಕವಾಗಿರುತ್ತದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.

3. ಪ್ರಸ್ತುತ ಎಲ್ಲಾ ಗ್ರಾಮ ಪಂಚಾಯತಿಯವರು ತಿಂಗಳಿಗೊಮ್ಮೆ ಬಿ.ಆರ್.ಎಸ್ ಮುಕ್ತಾಗೊಳಿಸದೇ ಇರುವುದು ಹಾಗೂ ಎಲ್ಲಾ ತಿಂಗಳ BRS ಅನ್ನು ಒಮ್ಮೆಲೇ ವರ್ಷಾಂತ್ಯ ಅಂತ್ಯದಲ್ಲಿ ಮುಕ್ತಾಯಗೊಳಿಸುತ್ತಿರುವುದನ್ನು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

.....2

4. ಎಲ್ಲಾ ಗ್ರಾಮ ಪಂಚಾಯತಿರವರಿಗೆ ತಿಂಗಳಿಗೊಮ್ಮೆ BRS ಮುಕ್ತಾಯಗೊಳಿಸುವುದು ಕಡ್ಡಾಯಗೊಳಿಸಿ ಪಂಚತಂತ್ರ ತಂತ್ರಾಂಶದಲ್ಲಿ ಪ್ರತಿ ತಿಂಗಳ 10ನೇ ತಾರೀಖಿನವರೆಗೆ BRS ಮುಕ್ತಾಯಗೊಳಿಸದೇ ಇರುವ ಗ್ರಾಮ ಪಂಚಾಯತಿಯವರಿಗೆ ಪಂಚತಂತ್ರ ತಂತ್ರಾಂಶದಲ್ಲಿ ಬೇರೆ ಕಾರ್ಯನಿರ್ವಹಿಸದ ಹಾಗೇ ನಿರ್ಬಂಧಿಸಲು BRS ಮುಕ್ತಾಯಗೊಳಿಸಿ ನಂತರ ಪಂಚತಂತ್ರ ತಂತ್ರಾಂಶದಲ್ಲಿ ಬೇರೆ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವುದು ಸೂಕ್ತವೆಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಅಭಿಪ್ರಾಯಪಟ್ಟರು.

5. ಪಂಚತಂತ್ರ ತಂತ್ರಾಂಶದಲ್ಲಿ BRS ಕಡ್ಡಾಯಗೊಳಿಸುವುದರಿಂದ ಎಲ್ಲಾ ಯೋಜನೆಯ ಗ್ರಾಮ ಪಂಚಾಯಿತಿಯ ಆರ್ಥಿಕ/ಭೌತಿಕ ಸ್ಥಿತಿ ಗತಿಗಳನ್ನು ಗ್ರಾಮ ಪಂಚಾಯತಿಯು ಪಡೆಯುತ್ತಿರುವ ಆದಾಯ ಮತ್ತು ಖರ್ಚುಗಳ ಮಾಹಿತಿಯನ್ನು ಗ್ರಾಮ ಪಂಚಾಯತಿಯ ಅನುಷ್ಠಾನ ಮಾಡುತ್ತಿರುವ ವಿವಿಧ ಯೋಜನೆಗಳನ್ನು ಬ್ಯಾಂಕಿನ ವಹಿವಾಟು ಮೂಲಕ ಪಾರದರ್ಶಕವಾಗಿ ನಡೆಸುತ್ತಿರುವ ಬಗ್ಗೆ ತಿಳಿಯಬಹುದಾಗಿದೆ ಹಾಗೂ ಬೇಡಿಕೆ ಮತ್ತು ವಸೂಲಾತಿಯನ್ನು ಅಳವಡಿಸಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

6. ಮಾನ್ಯ ಪ್ರಧಾನ ಕಾರ್ಯದರ್ಶಿರವರು ಎಲ್ಲಾ ಗ್ರಾಮ ಪಂಚಾಯತಿಯಲ್ಲಿ ತಿಂಗಳಿಗೊಮ್ಮೆ BRS ಮುಕ್ತಾಯಗೊಳಿಸುವ ಪ್ರಕ್ರಿಯೆಯನ್ನು ಕಡ್ಡಾಯಗೊಳಿಸಲು ಅನುಮತಿ ನೀಡಿದರು. ಅದರಂತೆ ಪಂಚತಂತ್ರ ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡು ಮಾಡಲು ಎನ್.ಐ.ಸಿ ಅಧಿಕಾರಿಗಳಿಗೆ ತಿಳಿಸಿದರು.

**(ಕ್ರಮ: ಎನ್.ಐ.ಸಿ, ಬೆಂಗಳೂರು)**

7. ಆಸ್ತಿ ತೆರಿಗೆ, ಕುಡಿಯುವ ನೀರಿನ ತೆರಿಗೆ ಹೊರತುಪಡಿಸಿ ಉಳಿದ ತೆರಿಗೆಗಳನ್ನು ಪಂಚತಂತ್ರದಲ್ಲಿ ನಮೂದಿಸಲು ಅವಕಾಶ ನೀಡಬೇಕು ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

8. ಇತರೆಗೆ ಸಂಬಂಧಿಸಿದ ವಿವಿಧ ನಮೂನೆಯ ಮಾದರಿಯ ವಸೂಲಿ ಮಾಡಲಾದ ಕಂದಾಯವನ್ನು ನಿರ್ಧಿಷ್ಟ ಸ್ಥಿತಿಯಲ್ಲಿ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿದಲ್ಲಿ ಪಂಚಾಯಿತಿಯ ಆದಾಯದ ನಿಖರ ಮಾಹಿತಿಯನ್ನು ಸರ್ಕಾರವು ತೆಗೆದುಕೊಳ್ಳಬಹುದು ಹಾಗೂ ಡಿಸಿಬಿ ವರದಿಯಲ್ಲಿನ ಶೇಕಡವಾರು ಪ್ರಗತಿ ಸಾಧಿಸಿ ಪಂಚಾಯತಿಯು ವಸೂಲಿ ಮಾಡಲಾದ ಸಂಕ್ಷಿಪ್ತ ಮಾಹಿತಿಯನ್ನು ತಿಳಿಯಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

9. ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಪಂಚತಂತ್ರ ತಂತ್ರಾಂಶದಲ್ಲಿ ಆಸ್ತಿ ತೆರಿಗೆ, ಕುಡಿಯುವ ನೀರಿನ ತೆರಿಗೆ ಹೊರತುಪಡಿಸಿ ಉಳಿದ ತೆರಿಗೆಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ನಮೂದಿಸಲು ಅವಕಾಶ ನೀಡಲು ಎನ್.ಐ.ಸಿ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಎನ್.ಐ.ಸಿ, ಬೆಂಗಳೂರು)**

10. ನೀರಿನ ತೆರಿಗೆ, ಪಾರ್ಕಿಂಗ್ ಶುಲ್ಕ, ಸಂತೆ ಶುಲ್ಕ, ತ್ಯಾಜ್ಯದ ಶುಲ್ಕ ಮತ್ತು ಇತರ ಶುಲ್ಕಗಳನ್ನು ಪಂಚತಂತ್ರದಲ್ಲಿಲ್ಲದ ಆಸ್ತಿಗಳಿಂದ ವಸೂಲಾತಿಗೆ ಅವಕಾಶ ನೀಡಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

11. ಇದರಿಂದ ಪಂಚಾಯತಿಯ ಒಟ್ಟಾರೆ ಆದಾಯದಲ್ಲಿ ನಿರ್ದಿಷ್ಠ ಮಾದರಿಯ ವಿವಿಧ ಕಂದಾಯ ವಸೂಲಾತಿಗಳನ್ನು ಪಂಚತಂತ್ರದಲ್ಲಿ ಅಳವಡಿಸಿದಲ್ಲಿ ಪಂಚಾಯತಿಯು ಸಾಧಿಸಿದ ಆರ್ಥಿಕ ಸಾಧನೆಯನ್ನು ತಿಳಿಯಲು ನೆರವಾಗುತ್ತದೆ.

.....3

12. ಗ್ರಾಮ ಪಂಚಾಯತಿಯ ಆಸ್ತಿ ವಹಿಯಲ್ಲಿ ದಾಖಲಾಗಿರುವ ಆಸ್ತಿಗಳ ಸಂಖ್ಯೆಗೂ ಪಂಚತಂತ್ರ ತಂತ್ರಾಂಶದಲ್ಲಿ ದಾಖಲಾಗಿರುವ ಆಸ್ತಿಗಳ ಸಂಖ್ಯೆಗೆ ಬಹಳಷ್ಟು ವ್ಯತ್ಯಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಇದರಿಂದ ಗ್ರಾಮ ಪಂಚಾಯತಿರವರು ಪಂಚತಂತ್ರ ತಂತ್ರಾಂಶದಲ್ಲಿ ಇಲ್ಲದೇ ಇರುವ ಅಸ್ತಿಗಳಿಗೆ ತೆರಿಗೆ ವಸೂಲಾತಿ ಮಾಡಿದರೂ ಸಹ ಬೇಡಿಕೆ ಮತ್ತು ವಸೂಲಾತಿಯನ್ನು ಅಳವಡಿಸಲು ಸಾಧ್ಯವಾಗುವುದಿಲ್ಲ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ತಿಳಿಸಿದರು.

13. ಪಂಚತಂತ್ರ ತಂತ್ರಾಂದಲ್ಲಿ ಬಿಟ್ಟು ಹೋಗಿರುವ ಆಸ್ತಿಗಳ ಸೇರ್ಪಡೆಗೆ ಅವಕಾಶ ನೀಡಲು ಈಗಾಗಲೇ ನಿರ್ದೇಶಕರು, (ಪಂ.ರಾಜ್-1) ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಎನ್.ಐ.ಸಿ ರವರಿಗೆ ಇ-ಸ್ವತ್ತು ತಂತ್ರಾಂಶದಲ್ಲಿ ಆಸ್ತಿಗಳ ಸೇರ್ಪಡೆಗಾಗಿ ಅವಕಾಶ ನೀಡಲು ತಿಳಿಸಲಾಗಿದೆ ಎಂದು ನಿರ್ದೇಶಕರು, ಪಂ.ರಾಜ್-1 ರವರು ಮಾನ್ಯ ಪ್ರಧಾನ ಕಾರ್ಯದರ್ಶಿರವರಿಗೆ ತಿಳಿಸಿದರು.

14. ಮಾನ್ಯ ಪ್ರಧಾನ ಕಾರ್ಯದರ್ಶಿ ರವರು, ಹಿರಿಯ ತಾಂತ್ರಿಕ ನಿರ್ದೇಶಕರಿಗೆ 15 ದಿನಗಳೊಳಗೆ ಸದರಿ ಅವಕಾಶವನ್ನು ಇ-ಸ್ವತ್ತು ತಂತ್ರಾಂಶದಲ್ಲಿ ನೀಡಲು ಸೂಚಿಸಿದರು.

**(ಕ್ರಮ: ಎನ್.ಐ.ಸಿ, ಬೆಂಗಳೂರು)**

15. ಗ್ರಾಮ ಪಂಚಾಯತ್‌ಗಳಲ್ಲಿ ಆಸ್ತಿ ತೆರಿಗೆ ವಸೂಲಾತಿಯಲ್ಲಿ ಸುಧಾರಣೆ ತರಲು Mobile app ಮತ್ತು Point of sale device ಗಳನ್ನು ಬಳಸುವುದು ಸೂಕ್ತವೆಂದು ನಿರ್ದೇಶಕರು, ಪಂ.ರಾಜ್-1 ರವರು ಅಭಿಪ್ರಾಯ ಪಟ್ಟರು.

16. ಗ್ರಾಮ ಪಂಚಾಯತ್‌ಗಳಲ್ಲಿ ಆಸ್ತಿ ತೆರಿಗೆ ವಸೂಲಾತಿ ಮಾಡಲು Point of Sale device (POS) ಗಳನ್ನು ಬ್ಯಾಂಕ್‌ಗಳಿಂದ ಬಾಡಿಗೆ ಪಡೆಯಲು Expression of Interest (EOI) ಅನ್ನು ತಯಾರಿಸಲು ಹಾಗೂ ದಿನ ಪತ್ರಿಕೆಯಲ್ಲಿ ಜಾಹೀರಾತನ್ನು ನೀಡಲು ನಿರ್ದೇಶಕರು, (ಇ-ಆಡಳಿತ) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿರವರು ಸೂಚಿಸಿದರು.

**[ಕ್ರಮ: ನಿರ್ದೇಶಕರು (ಇ-ಆಡಳಿತ)]**

**<u>ಬಾಪೂಜಿ ಸೇವಾ ಕೇಂದ್ರಗಳಲ್ಲಿ ಉಂಟಾಗುತ್ತಿರುವ ಸಮಸ್ಯೆಗಳು:</u>**

1) ಬಾಪೂಜಿ ಸೇವಾ ಕೇಂದ್ರದ ಮೂಲಕ ಒದಗಿಸಲಾಗುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ 43 ಸೇವೆಗಳಲ್ಲಿ ಕೆಲವೊಂದು ಫಲಾನುಭವಿ ಸಂಬಂಧಿತ, ತೆರಿಗೆ ಪಾವತಿ ಸಂಬಂಧಿತ ಸೇವೆಗಳಾಗಿರುವುದರಿಂದ ಹಾಗೂ ಕೆಲವೊಂದು ಸೇವೆಗಳು online ಮೂಲಕ ನೀಡಲು ಗ್ರಾಮ ಪಂಚಾಯತಿಗಳಿಂದ ಸಾಧ್ಯವಿಲ್ಲದೇ ಇರುವುದರಿಂದ, 43 ಸೇವೆಗಳನ್ನು ಪರಿಷ್ಕರಿಸುವ ಅವಶ್ಯಕತೆ ಇರುತ್ತದೆ ಹಾಗೂ ದಿನಾಂಕ:04.08.2018 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸು(ಇ-ಆಡಳಿತ) ಇಲಾಖೆ ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ 43 ಸೇವೆಗಳನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿತ್ತು ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.
2) ಅದರಂತೆ, 43 ಸೇವೆಗಳನ್ನು **25** ಸೇವೆಗಳಾಗಿ ಪರಿಷ್ಕರಿಸಲಾಗಿದ್ದು, ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಲು NIC ರವರಿಗೆ ಈಗಾಗಲೇ ಪತ್ರವನ್ನು ಬರೆಯಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

.....4

3) ಪರಿಷ್ಕೃತ ಸೇವೆಗಳನ್ನು ಕಡ್ಡಾಯವಾಗಿ ಇ-ಸ್ವತ್ತು ತಂತ್ರಾಂಶದ Form 9 & Form 11A ಮಾದರಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು Digital Signature ನೊಂದಿಗೆ ವಿತರಿಸಲು ತೀರ್ಮಾನಿಸಲಾಗಿದ್ದು, ಅದರಂತೆ ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡು ಈಗಾಗಲೇ ತಿಳಿಸಿರುವುದರಿಂದ ಕೂಡಲೇ ಕ್ರಮವಹಿಸಲು NIC ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

4) ಬಾಪೂಜಿ ಸೇವಾ ಕೇಂದ್ರದ ಅನುಷ್ಠಾನಕ್ಕಾಗಿ ಬಾಪೂಜಿ ಸೇವಾ ಕೇಂದ್ರಕ್ಕಾಗಿ ಪ್ರತ್ಯೇಕ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಈಗಾಗಲೇ NIC ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

5) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸೇವೆಗಳಿಗೆ ಈ ಹಿಂದೆ ವಿನ್ಯಾಸಗೊಳಿಸಿರುವ Process flow ನ್ನು ಸರಳೀಕರಣಗೊಳಿಸಿದಾದಲ್ಲಿ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಒದಗಿಸಲಾಗುತ್ತಿರುವ ಸೇವೆಗಳ ಪ್ರಗತಿಯನ್ನು ಸಾಧಿಸಬಹುದಾಗಿದ್ದು, ಅದರಂತೆ ದಿನಾಂಕ:26.05.2018 ರಂದು ಜರುಗಿದ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸೇವೆಗಳ ವಿತರಣೆಯನ್ನು ಸರಳೀಕರಣಗೊಳಿಸುವ ಬಗ್ಗೆ ತೀರ್ಮಾನಿಸಲಾಗಿದ್ದು, ಈಗಾಗಲೇ ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡು ಮಾಡಲು NIC ರವರಿಗೆ ಪತ್ರಿಸಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

6) ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಮೇಲೆ ತಿಳಿಸಲಾಗಿರುವ ದಿನಾಂಕ:30.10.2018 ರೊಳಗೆ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಲು ಹಾಗೂ ತಂತ್ರಾಂಶದಲ್ಲಿ ಮಾರ್ಪಾಡು ಮಾಡಲು ಎನ್.ಐ.ಸಿ ಅಧಿಕಾರಿಗಳಿಗೆ ಸೂಚಿಸಿದರು.

7) ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸೇವೆಗಳನ್ನು ಆನ್‌ಲೈನ್ ಮೂಲಕ ವಿತರಿಸಲು ಬೇಕಾದ Payment Gateway ಅನ್ನು ಪಡೆಯಲು ಈ ಕೂಡಲೇ ಕ್ರಮವಹಿಸಲು ನಿರ್ದೇಶಕರು (ಇ-ಆಡಳಿತ) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಸೂಚಿಸಿದರು.

8) ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಹಣಿ ಪತ್ರಗಳನ್ನು ವಿತರಿಸಲಾಗುತ್ತಿದ್ದು, ನಾಡಕಛೇರಿ ಸೇವೆಗಳನ್ನು ನೀಡಲು ಆಡಳಿತಾತ್ಮಕ ಸಮಸ್ಯೆಗಳಿರುವುದಾಗಿ ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

9) ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಆಡಳಿತಾತ್ಮಕ ಸಮಸ್ಯೆಗಳನ್ನು ಬಗೆಹರಿಸಲು ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಯನ್ನು ಆಯೋಜಿಸಲು ನಿರ್ದೇಶಕರು(ಇ-ಆಡಳಿತ) ರವರಿಗೆ ತಿಳಿಸಿದರು.

10) ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಯಾವುದೇ B2C ಸೇವೆಗಳನ್ನು ನೀಡಲಾಗುತ್ತಿಲ್ಲ Bangalore One ಅಥವಾ CSC ತಂತ್ರಾಂಶದಲ್ಲಿ Integrate ಮಾಡಿದಲ್ಲಿ B2C ಸೇವೆಗಳನ್ನು ನೀಡಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

.....5

11) ಮಾನ್ಯ ಪ್ರಧಾನ ಕಾರ್ಯದರ್ಶಿಯವರು B2C ಸೇವೆಗಳನ್ನು ಪಡೆಯುವ ಬಗ್ಗೆ ಸಿಆಸುಇ(ಇ–ಆಡಳಿತ) ಮತ್ತು CSC ತಂಡದವರೊಂದಿಗೆ ಸಭೆಯನ್ನು ಆಯೋಜಿಸಲು ನಿರ್ದೇಶಕರು(ಇ–ಆಡಳಿತ) ರವರಿಗೆ ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ/21/ಗ.ಕೋಶ/2018
ದಿನಾಂಕ:15.10.2018

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ನಿರ್ದೇಶಕರು(ಇ–ಆಡಳಿತ)(ಪ್ರ), ಗ್ರಾಅಪ ಇಲಾಖೆ, ಬೆಂಗಳೂರು
2. ನಿರ್ದೇಶಕರು(ಪಂ.ರಾಜ್–1), ಗ್ರಾಅಪ ಇಲಾಖೆ, ಬೆಂಗಳೂರು.
3. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
4. ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ಸಹಾಯಕ ನಿರ್ದೇಶಕರು(ಇ–ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
6. ರಾಜ್ಯ ಯೋಜನಾ ವ್ಯವಸ್ಥಾಪಕರು, (ಇ–ಪಂಚಾಯತ್) ಗ್ರಾಅಪ ಇಲಾಖೆ.
7. ತಾಂತ್ರಿಕ ಸಮಾಲೋಚಕರು, ಇ–ಆಡಳಿತ, ಗ್ರಾಅಪ ಇಲಾಖೆ.

ಪ್ರತಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.